C.C. No.- 3256/2021
CW-3 / PW-2

**ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ ಗಂಗಾವತಿ.**

**ಸಾಕ್ಷಿಯನ್ನು ದಿನಾಂಕ- 27.06.2025 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು- | ಬಸನಗೌಡ |
| ತಂದೆ / ಗಂಡನ ಹೆಸರು- | ಸನ್ನೆಗೌಡ |
| ವಯಸ್ಸು- | 33 ವರ್ಷ |
| ಉದ್ಯೋಗ- | ನೌಕರಿ |
| ವಾಸಸ್ಥಳ- | ಲಾಯದಹುಣಸಿ |

**ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ**-

ನನಗೆ ಚಾಸಾ-1, 2, 6 ರಿಂದ 11 ರವರ ಪರಿಚಯವಿದೆ. ಆರೋಪಿತನ ಪರಿಚಯವಿದೆ.

2. ದಿನಾಂಕ 18.05.2021 ರಂದು ಲಾಯದಹುಣಸಿ ಗ್ರಾಮದಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ಕಾರಣ ಪೊಲೀಸರು ಬಂದಿದ್ದರು. ಚಾಸಾ-1 ರವರ ಮನೆ ದಿನಾಂಕ 18.05.2021 ರಂದು ಕಳ್ಳತನವಾಗಿರುತ್ತದೆ. ಪೊಲೀಸರು ದಿನಾಂಕ 19.05.2021 ರಂದು ಸಂಜೆ 4 ಗಂಟೆಗೆ ಸ್ಥಳಕ್ಕೆ ಬಂದರು. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು 2 ರವರು ಚಾಸಾ-1 ರವರ ಮನೆಯ ಹತ್ತಿರ ಇದ್ದೆವು. ಪೊಲೀಸರು ನನ್ನನ್ನು ಹಾಗೂ ಚಾಸಾ-2 ರವರನ್ನು ಪಂಚರಾಗಲು ಹೇಳಿದರು. ಅದಕ್ಕೆ ನಾವು ಒಪ್ಪಿಕೊಂಡೆವು. ಘಟನಾ ಸ್ಥಳದ ಪಂಚನಾಮೆಯನ್ನು ಸುಮಾರು 4-30 ಗಂಟೆಗೆ ಮಾಡಿದರು. ಪಂಚನಾಮೆಯಾದ ನಂತರ ಘಟನಾ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿಪಿ-2 ನ್ನು ನೋಡಿ ಗುರುತಿಸಿದ್ದು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ.

**ಪಾಟೀಸವಾಲು- ಆರೋಪಿ ಪರ ಶ್ರೀ ಹೆಚ್ ಬಿ ಎ ವಕೀಲರಿಂದ**-

3. ನಾನು ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. 2021 ರಲ್ಲಿ ನಾನು ಹೊಲದಲ್ಲಿ ಕೆಲಸ ಮಾಡುತ್ತಿದ್ದೆ. ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ.

ನಿಪಿ-2 ಕ್ಕೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಿಪಿ-2 ನ್ನು ಪೊಲೀಸರು ನನಗೆ ಓದಿ ಹೇಳಿರುತ್ತಾರೆ. ನಿಪಿ-2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಘಟನಾ ಸ್ಥಳದ ಪಂಚನಾಮೆಯನ್ನು ಹೇಳಲು ಬರುತ್ತದೆ. ಚಾಸಾ-1 ಹಾಗೂ ನಾವು ಒಂದೇ ಜಾತಿಯವರು. ಚಾಸಾ-1 ರವರು ನಮ್ಮ ಊರಿನವರು. ಚಾಸಾ-1 ರವರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನಾನು ಯಾವುದೇ ಪಂಚನಾಮೆಗೆ ಹೋಗದಿದ್ದರೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಪಂಚನಾಮೆ ಮಾಡದಿದ್ದರೂ ಪಂಚನಾಮೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ.